## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಮ್/491/2022
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 10/07/2023.

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

**ವಿಷಯ:** (1) ಶ್ರೀ ಸಿದ್ದಪ್ಪ ತಂದೆ ಹನಮುಪ್ಪ ಡಂಬಳ,ಗ್ರಾಮ ಪಂಚಾಯತ್ ಅಭಿವೃದ್ದಿ ಅಧಿಕಾರಿ, ಗ್ರಾಮ ಪಂಚಾಯತ್ ಮುರುಡಿ, ತಾಲ್ಲೂಕು ಮುಂಡರಗಿ (ಸದ್ಯ ಗ್ರಾಮ ಪಂಚಾಯತ್ ಕದಾಂಪೂರ, ತಾಲ್ಲೂಕ: ಮುಂಡರಗಿ) (2) ಶ್ರೀ ಪ್ರದೀಪ ಪರಶುರಾಮ ಕದಂ, ದ್ವಿತಿಯ ದರ್ಜೆ ಲೆಕ್ಕಸಹಾಯಕ, ಹಾರೋಗೇರಿ ಗ್ರಾಮ ಪಂಚಾಯತ್, ಹೆಚ್ಚುವರಿ ಪ್ರಭಾರ, ಮುರಡಿ ಗ್ರಾಮ ಪಂಚಾಯತ್, ತಾಲ್ಲೂಕಾ ಮುಂಡರಗಿ) (ಸದ್ಯ ಗ್ರಾಮ ಪಂಚಾಯತ್ ಕೋಣ್ಣೂರ, ತಾಲ್ಲೂಕ: ನರಗುಂದ) ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

ಗದಗ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ, ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀ ಸಿದ್ದಪ್ಪ ತಂದೆ ಹನಮುಪ್ಪ ಡಂಬಳ, ಗ್ರಾಮ ಪಂಚಾಯತ್ ಅಭಿವೃದ್ದಿ ಅಧಿಕಾರಿ, ಗ್ರಾಮ ಪಂಚಾಯತ್ ಮುರುಡಿ, ತಾಲ್ಲೂಕು ಮುಂಡರಗಿ (ಸದ್ಯ ಗ್ರಾಮ ಪಂಚಾಯತ್ ಕದಾಂಪೂರ, ತಾಲ್ಲೂಕ: ಮುಂಡರಗಿ) (2) ಶ್ರೀ ಪ್ರದೀಪ ಪರಶುರಾಮ ಕದಂ, ದ್ವಿತಿಯ ದರ್ಜೆ ಲೆಕ್ಕಸಹಾಯಕ, ಹಾರೋಗೇರಿ ಗ್ರಾಮ ಪಂಚಾಯತ್, ಹೆಚ್ಚುವರಿ ಪ್ರಭಾರ, ಮುರಡಿ ಗ್ರಾಮ ಪಂಚಾಯತ್, ತಾಲ್ಲೂಕಾ ಮುಂಡರಗಿ (ಸದ್ಯ ಗ್ರಾಮ ಪಂಚಾಯತ್ ಕೋಣ್ಣೂರ, ತಾಲ್ಲೂಕ: ನರಗುಂದ) (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ನಾಗರಾಜ ಬಾಲಪ್ಪ ಹೊಸಮನಿ, ಹರೇವಡ್ಡಟ್ಟಿ, ತಾಲ್ಲೂಕು:ಶಿರಹಟ್ಟಿ, ಜಿಲ್ಲೆ: ಗದಗ

(ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2 <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:</u> ದೂರುದಾರರು ತಮ್ಮ ದತ್ತಕ್ಕ ತಂದೆ-ತಾಯಿ ಹಾಗೂ ತನ್ನ ಹೆಂಡತಿಯೊಂದಿಗೆ ತಮ್ಮ ತಾಯಿಯ ತವರೂರಾದ ಹಿರೇವಡ್ಡಟ್ಟಿಯಲ್ಲಿ ವಾಸವಾಗಿದ್ದು, ತಮ್ಮ ದೊಡ್ಡಪ್ಪ ಬಾಲಪ್ಪನಿಗೆ ಮಕ್ಕಳು ಇಲ್ಲದೇ ಇದ್ದುದರಿಂದ ಅವರು ದೂರುದಾರರನ್ನು ದತ್ತು ತೆಗೆದುಕೊಂಡಿರುತ್ತಾರೆ. ದೂರುದಾರರ ಊರು ಮುರಡಿ ಗ್ರಾಮವಾಗಿದ್ದು, ಅಲ್ಲಿ ಅವರ ತಂದೆ ಬಾಲಪ್ಪ ಮರಿಯಪ್ಪ ಹೊಸಮನಿ ಇವರ ಭಾಗಕ್ಕೆ ಪಿರ್ತ್ರಾಜಿತವಾಗಿ 5 ಎಕರೆ 24 ಗುಂಟೆ ಜಮೀನು ಬಂದಿದ್ದು, ಆ ಜಮೀನಿನಲ್ಲಿ 2 ಎಕರೆ 20 ಗುಂಟೆ (ರಿಸ.ನಂ. 34/1) ಜಮೀನನ್ನು ಕೃಷಿಯೇತರ ಜಮೀನಾಗಿ ಮಾಡಿಸಿ ಡಿ.ಸಿ ಗದಗರವರಿಂದ ದಿ: 17-01-2018 ರಂದು ಆದೇಶವಾಗಿರುತ್ತದೆ. ಎನ್.ಎ. ಆದ ಜಮೀನಿನಲ್ಲಿ 43 ಪ್ಲಾಟ್‌ಗಳನ್ನು ಮಾಡಿದ್ದು, ಅದರಲ್ಲಿ 2 ಪ್ಲಾಟ್‌ಗಳು ನಾಗರಿಕ ಸೌಲಭ್ಯಕ್ಕಾಗಿ ಮುರಡಿ ಗ್ರಾಮ ಪಂಚಾಯತಿಗೆ ಕೊಟ್ಟಿದ್ದು, ಇನ್ನು 41 ಪ್ಲಾಟ್‌ಗಳು ಅವರ ತಂದೆಯ ಹೆಸರಿನಲ್ಲಿರುತ್ತವೆ. ಈ 41 ಪ್ಲಾಟ್‌ಗಳನ್ನು ಗ್ರಾಮ ಪಂಚಾಯತಿಯಲ್ಲಿ ಎಂಟ್ರಿ ಮಾಡಿಸಿ ಕಂಪ್ಯೂಟರ್ ಉತಾರ ಪಡೆಯುವ ಸಲುವಾಗಿ ಕೆ.ಜೆ.ಪಿ ಜಮೀನು ಉತಾರ ತಮ್ಮ ತಂದೆಯ ಆಧಾರ ಕಾರ್ಡದೊಂದಿಗೆ ಮುರಡಿ ಗ್ರಾಮ ಪಂಚಾಯತಿಯಲ್ಲಿ ಸುಮಾರು ಮೂರು ತಿಂಗಳ ಹಿಂದೆ ಅವರ ತಂದೆಯವರು ಅರ್ಜಿ ಕೊಟ್ಟಿದ್ದು, ನಂತರ ಅವರ ತಂದೆಯವರು ಬಿದ್ದು, ಕಾಲು ಮುರಿದುಕೊಂಡು ಉಪಚಾರ ಹೊಂದುತ್ತಿದ್ದರಿಂದ ದೂರುದಾರರು ಹಲವಾರು ಬಾರಿ ಮುರಡಿ ಗ್ರಾಮ ಪಂಚಾಯತಿಗೆ ಹೋಗಿ 1 ಮತ್ತು 2ನೇ ಎದುರುದಾರರನ್ನು ಭೇಟಿಯಾಗುತ್ತ ಬಂದಿರುತ್ತಾರೆ. ಹಾಗೂ 1 ಮತ್ತು 2ನೇ ಎದುರುದಾರರು ದೂರುದಾರರ ಕೆಲಸವನ್ನು ಮಾಡಿಕೊಡುವುದಾಗಿ ಹೇಳುತ್ತ ಬಂದಿರುತ್ತಾರೆ. ಇದೇ ಕೆಲಸಕ್ಕಾಗಿ 1 ನೇ ಎದುರುದಾರರವರಿಗೆ ಭೇಟಿಯಾದಾಗ 2ನೇ ಎದುರುದಾರರು ಮುಂಡರಗಿಯಲ್ಲಿರುವ ಕಾವೇರಿ ಸರ್ಕಲ್ ಹತ್ತಿರವಿರುವ ತಮ್ಮ ರೂಮಿಗೆ ಬರುವಂತೆ ತಿಳಿಸಿರುತ್ತಾರೆ. ಆ ಪ್ರಕಾರ ದೂರುದಾರರು ದಿ: 11-08-2020 ರಂದು ಮುಂಜಾನೆ 10.30 ಗಂಟೆ

ಸುಮಾರಿಗೆ 2 ನೇ ಎದುರುದಾರರ ರೂಮಿಗೆ ಹೋದಾಗ ಆ ರೂಮನಲ್ಲಿ 1 ಮತ್ತು 2 ನೇ ಎದುರುದಾರರು ಇದ್ದು ಅವರಲ್ಲಿ 1 ನೇ ಎದುರುದಾರರು ದೂರುದಾರರಿಗೆ 1 ಪ್ಲಾಟ್ ನೊಂದ ಮಾಡಿ ಉತಾರ ಕೊಡಲು ರೂ. 1,500/- ಗಳು ಕೇಳಿರುತ್ತಾರೆ. ಆಗ ದೂರುದಾರರು ಅಷ್ಟು ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ಕೊನೆಗೆ ರೂ. 1,000/- ನಂತೆ 41 ಪ್ಲಾಟ್‌ಗೆ ರೂ. 41,000/- ಕೊಡುವಂತೆ ತಿಳಿಸಿರುತ್ತಾರೆ. ಆಗ ದೂರುದಾರರು ಎದುರುದಾರರುಗಳಿಗೆ 3-4 ದಿವಸ ಬಿಟ್ಟು ಬಂದು ಹಣ ಕೊಡುವುದಾಗಿ ಹೇಳಿರುತ್ತಾರೆ. ಹಾಗೂ ಸದರಿ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ. 1 ಮತ್ತು 2 ನೇ ಎದುರುದಾರರು ದೂರುದಾರರಿಗೆ ಫೋನ್ ಮಾಡಿ ಮುಂಜಾನೆ 10.00 ಗಂಟೆಯೊಳಗೆ ಮುಂಡರಗಿ ರೂಮ್‌ಒಳಗೆ ಬಂದು ಹಣ ಕೊಡುವಂತೆ ಅವರಿಗೆ ತಿಳಿಸಿರುತ್ತಾರೆ. ದೂರುದಾರರ ತಂದೆಯವರ ಹೆಸರಿನಲ್ಲಿರುವ 41 ಎನ್.ಎ ಆದ ಪ್ಲಾಟ್‌ಗಳನ್ನು ಗ್ರಾಮ ಪಂಚಾಯತಿಯಲ್ಲಿ ನೊಂದ ಮಾಡಿ ಅವರ ತಂದೆಯ ಹೆಸರಿನಲ್ಲಿ 41 ಕಂಪ್ಯೂಟರ್ ಉತಾರ ಕೊಡಲು ಮುರಡಿ ಗ್ರಾಮ ಪಂಚಾಯತಿಯ 1 ಮತ್ತು 2ನೇ ಎದುರುದಾರರು ರೂ. 41,000/- ಲಂಚ ಕೊಡಲು ಕೇಳಿರುತ್ತಾರೆ.

3 ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 13/08/2020 ರಂದು ಮಧ್ಯಾಹ್ನ 03-45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಗದಗ ಪೋಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೋಲೀಸ್ ಠಾಣೆಯಲ್ಲಿ ಮೊ. ಸಂ. 12/2020 ಪಿ.ಸಿ. ಕಾಯಿದೆ 1988 ರ ಕಲಂ 7 (ಎ) ರಡಿ 1 ಮತ್ತು 2ನೇ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4 ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಮಹಾಂತಗೌಡ ತಂದೆ ಫಕ್ಕೀರಗೌಡ ಪಾಟೀಲ ಮತ್ತು ಶ್ರೀ ಮಂಜುನಾಥ ತಂದೆ ಶಿವಪುತ್ರ ಜಳಕೋಟಿ ಇವರನ್ನು ಬರಮಾಡಿಕೊಂಡು ಅವರುಗಳ ಪರಿಚಯ ಮಾಡಿಸಿ, ದೂರುದಾರರಿಗೂ ಸಹ ಪರಿಚಯ ಮಾಡಿಸಿ ದೂರುದಾರರು ಸಲ್ಲಿಸಿದ ಫಿರ್ಯಾದಿಯ ನಕಲನ್ನು ಹಾಗೂ ಪ್ರಥಮ ವರ್ತಮಾನದ ವರದಿಯನ್ನು ತೋರಿಸಿ ದೂರನ್ನು ಓದಿ ಹೇಳಿರುತ್ತಾರೆ. ನಂತರ ಬೇಡಿಕೆಯಿಟ್ಟಿರುವ ಲಂಚದ ಹಣವಾದ ರೂ.41,000/- ಗಳನ್ನು ಹಾಜರುಪಡಿಸಲು ತನಿಖಾಧಿಕಾರಿಯವರು ಸೂಚಿಸಿದಾಗ ದೂರುದಾರರು ತಮ್ಮ ಪ್ಯಾಂಟಿನ ಜೇಬಿನಿಂದ ರೂ. 2,000/- ಮುಖಬೆಲೆಯ 20 ನೋಟುಗಳನ್ನು

ಹಾಗೂ 500/- ಮುಖಬೆಲೆಯ 2 ನೋಟುಗಳನ್ನು ತೆಗೆದು ತನಿಖಾಧಿಕಾರಿಯವರ ಟೇಬಲ್ ಮೇಲೆ ಹಾಜರಪಡಿಸಿದಾಗ ಪಂಚ-2 ರವರು ಹೇಳಿದಂತೆ ಪಂಚ-1 ರವರು ಸದರಿ ನೋಟುಗಳ ಮೌಲ್ಯ ಮತ್ತು ನಂಬರ್‌ಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮುಖಾಂತರ ಸದರಿ ನೋಟುಗಳಿಗೆ ತೆಳುವಾಗಿ ಫಿನಾಪ್ತಲಿನ್ ಪುಡಿಯನ್ನು ಲೇಪನ ಮಾಡಿಸಿರುತ್ತಾರೆ. ಪಂಚ-2 ರವರು ದೂರುದಾರರ ಅಂಗಶೋಧನೆ ಮಾಡಿ ಶರ್ಟ್ ಜೇಬಿನಲ್ಲಿ ಏನೂ ಇರಲಿಲ್ಲವೆಂದು ತಿಳಿಸಿರುತ್ತಾರೆ. ಮತ್ತು ಪ್ಯಾಂಟ್ ಜೇಬನ್ನು ಪರಿಶೀಲನೆ ಮಾಡಲಾಗಿ ಪ್ಯಾಂಟಿನ ಮುಂದಿನ ಎಡಭಾಗದ ಜೇಬಿನಲ್ಲಿ ಮೊಬೈಲ್, ಬಲಭಾಗದಲ್ಲಿ ಕರ್ಚಿಫ್ ಹಾಗೂ ಹಿಂದಿನ ಜೇಬಿನಲ್ಲಿ ಚಿಲ್ಲರೆ ಹಣ ಮತ್ತು ಈ ಪ್ರಕರಣದ ಎಫ್.ಐ.ಆರ್ ಪ್ರತಿ ಇರುತ್ತವೆ ಎಂದು ತಿಳಿಸಿರುತ್ತಾರೆ. ಪಂಚ-2 ರವರು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಮ್ಮ ಕೈಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣದ ಬಣ್ಣ ಬದಲಾವಣೆಯಾಗಿರುವುದಿಲ್ಲ. ನಂತರ ಕೈಗಳನ್ನು ಕರವಸ್ತ್ರದಿಂದ ಒರೆಸಿಕೊಂಡು ಟೇಬಲ್ ಮೇಲೆ ಇದ್ದ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ತೆಗೆದುಕೊಂಡು ಎಣಿಸಿ ದೂರುದಾರರು ಧರಿಸಿದ್ದ ಶರ್ಟ್ ಜೇಬಿನಲ್ಲಿಟ್ಟು ತಮ್ಮ ಎರಡು ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ 1 ಮತ್ತು 2ನೇ ಎದುರುದಾರರು ಲಂಚದ ಬೇಡಿಕೆ ರೆಕಾರ್ಡ ಆಗಿರುವ ಮೊಬೈಲ್‌ನ್ನು ದೂರುದಾರರಿಂದ ಹಾಜರಪಡಿಸಿಕೊಂಡು ದೂರುದಾರರು ತೋರಿಸಿದಂತೆ ದಿ:11-08-2020 ರಂದು ರೆಕಾರ್ಡ ಆದ ಲಂಚದ ಬೇಡಿಕೆಯ ಸಂಭಾಷಣೆಯ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಲ್ಯಾಪಟಾಪಗೆ ವರ್ಗಾಯಿಸಿಕೊಂಡು ದೂರುದಾರರ ಮೊಬೈಲ್‌ನ್ನು ಅವರಿಗೆ ಮರಳಿಸಿರುತ್ತಾರೆ. ಲ್ಯಾಪಟಾಪ್‌ನಲ್ಲಿ ಸಂಗ್ರಹವಾದ ಸದರಿ ಸಂಭಾಷಣೆಯನ್ನು ತನಿಖಾಧಿಕಾರಿಯವರು ಪಂಚರಿಗೆ ಕೇಳಿಸಿ ಸದರಿ ಸಂಭಾಷಣೆಯ ಭಾಗವನ್ನು ಲ್ಯಾಪಟಾಪ್‌ದಿಂದ ಸಿ.ಡಿ.ಗೆ ಕಾಪಿ ಮಾಡಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ 1 ಮತ್ತು 2ನೇ ಎದುರುದಾರರಿಗೆ ಫೋನ್ ಮಾಡಿದಾಗ ಅವರು ಎಲ್ಲಿ ಬರಲು ತಿಳಿಸುತ್ತಾರೊ ಅಲ್ಲಿಗೆ ಹೋಗಿ 41 ಪ್ಲಾಟ್‌ಗಳ ಕಂಪ್ಯೂಟರ್ ಉತಾರ ಕೊಡುವ ಬಗ್ಗೆ ವಿಚಾರಿಸಿ ಕೇಳಿದಾಗ ಲಂಚದ ಹಣವನ್ನು ಕೊಡಲು ತಿಳಿಸಿ, ಎದುರುದಾರರು ಲಂಚದ ಹಣ ಪಡೆದು

ಎಲ್ಲಿಟ್ಟುಕೊಂಡಿರುತ್ತಾರೆ ಎಂಬುದನ್ನು ಗಮನಿಸಿ ಕೇಳಿದಾಗ ತಿಳಿಸಬೇಕೆಂದು ಮತ್ತು ಅವರು ಹಣವನ್ನು ಪಡೆದುಕೊಂಡ ನಂತರ ತಮ್ಮ ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ಮಾಡುವಂತೆ ತನಿಖಾಧಿಕಾರಿಯವರು ದೂರುದಾರರಿಗೆ ತಿಳಿಸಿ ತಮ್ಮ ಇಲಾಖೆಯ ವಾಯ್ಸ್ ರೆಕಾರ್ಡನ್ನು ಅವರಿಗೆ ನೀಡಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟು ಎದುರುದಾರರಿಗೆ ಹಣ ಕೊಡಲು ಹೋದಾಗ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಂಡು ಹೋಗಿ ಅಲ್ಲಿ ಜರುಗುವ ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತೆ ತಿಳಿಸಿರುತ್ತಾರೆ. ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಅಲ್ಲಿ ಜರುಗುವ ಘಟನೆಗಳನ್ನು ಗಮನಿಸಿ, ಕೇಳಿದಾಗ ಹೇಳುವಂತೆ ಹಾಗೂ ಪಂಚ-2 ರವರಿಗೆ ತಮ್ಮ ಜೊತೆಯಲ್ಲಿರುವಂತೆ ತನಿಖಾಧಿಕಾರಿಯವರು ತಿಳಿಸಿ ಉಳಿದ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಿ ಫಿನಾಪ್ತಲಿನ್ ಪುಡಿಯನ್ನು ಸವರಿದ್ದ ಸಿಬ್ಬಂದಿಯವರಿಗೆ ಕಛೇರಿಯಲ್ಲಿರುವಂತೆ ತಿಳಿಸಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ತಮ್ಮ ಸಿಬ್ಬಂದಿಯವರ ಮೂಲಕ ಪ್ರಮುಖ ಘಟನೆಗಳ ಪೋಟೋಗಳನ್ನು ಇಲಾಖೆಯ ಡಿಜಿಟಲ್ ಕ್ಯಾಮೆರಾದಿಂದ ತೆಗೆಸಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯನ್ನು ದಿ: 14-08-2020 ರಂದು ಬೆಳಗ್ಗೆ 6.30 ಗಂಟೆಯಿಂದ 07.45 ಗಂಟೆಯವರೆಗೆ ಗದಗ ಭ್ರಷ್ಟಾಚಾರ ನಿಗ್ರಹ ದಳ ಠಾಣೆಯಲ್ಲಿ ಲ್ಯಾಪಟಾಪ್ ಮೂಲಕ ಗಣಕೀಕರಣ ಮಾಡಿಸಿರುತ್ತಾರೆ.

5 ದಿನಾಂಕ 14/08/2020 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂದಿಯವರೊಂದಿಗೆ ಸರ್ಕಾರಿ ವಾಹನದಲ್ಲಿ ಎಸಿಬಿ ಕಛೇರಿಯಿಂದ ಮುಂಜಾನೆ 8 ಗಂಟೆಗೆ ಹೊರಟು ಅಡವಿಸೋಮಾಪುರ, ಬರದೂರ ಮಾರ್ಗವಾಗಿ ಮುಂಜಾನೆ 8.45 ಗಂಟೆಗೆ ದೂರುದಾರರು ತೋರಿಸಿದಂತೆ ಕೊಪ್ಪಳ ಸರ್ಕಲ್ ಮೂಲಕ ಬಜಂತ್ರಿ ಓಣಿ ತಲುಪಿದಾಗ ದೂರುದಾರರ ಸೂಚನೆಯಂತೆ ರಸ್ತೆ ಪಕ್ಕದಲ್ಲಿ ವಾಹನವನ್ನು ನಿಲ್ಲಿಸಿದಾಗ ಮುಂದೆ ಕಾಣುತ್ತಿದ್ದ ಒಂದು ಮನೆಯನ್ನು ತೋರಿಸಿ ಆ ಮನೆಯ ಮೇಲಿನ ಭಾಗದಲ್ಲಿರುವ ರೂಮನಲ್ಲಿ 2ನೇ ಎದುರುದಾರರು ಬಾಡಿಗೆಗೆ ಇರುತ್ತಾರೆಂದು ತಿಳಿಸಿದಾಗ ತನಿಖಾಧಿಕಾರಿಯವರು ದೂರುದಾರರಿಗೆ ಹಾಗೂ ಪಂಚ-1 ರವರಿಗೆ ವಾಹನದಿಂದ ಇಳಿಸಿ ದೂರುದಾರರ ಬಳಿ ಇದ್ದ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಸಿ 2ನೇ

ಎದುರುದಾರರ ರೂಮಿಗೆ ಕಳುಹಿಸಿರುತ್ತಾರೆ. ಹಾಗೂ ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚ-1 ರವರು ದೂರುದಾರರನ್ನು ಹಿಬಾಂಲಿಸಿಕೊಂಡು ರಸ್ತೆಯ ಪೂರ್ವ ಭಾಗದಲ್ಲಿಯ ವಸಂತಗೌಡ ಪಾಟೀಲ ಇವರ ಮಾಲೀಕತ್ವದ ಮನೆಯ ಮೇಲ್ಭಾಗಕ್ಕೆ ಮೆಟ್ಟಿಲುಗಳ ಮೂಲಕ ಹೋದಾಗ ದೂರುದಾರರು 2ನೇ ಎದುರುದಾರರ ರೂಮಿಗೆ ಹೋಗಿ ಅವರೊಂದಿಗೆ ಮಾತನಾಡಿದಾಗ 2ನೇ ಎದುರುದಾರರು ದೂರುದಾರರಿಗೆ ಎಷ್ಟು ತಂದಿರುವಿ ಎಂದು ಕೇಳಿದಾಗ ದೂರುದಾರರು 41 ಪ್ಲಾಟಿಂದು ಎಂದು ಹೇಳಿದಾಗ 2ನೇ ಎದುರುದಾರರು ಹಣವನ್ನು ಒಂದು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಹಾಕಲು ತಿಳಿಸಿರುತ್ತಾರೆ. ಆಗ ದೂರುದಾರರು ಪ್ಲಾಸ್ಟಿಕ್ ಬ್ಯಾಗನಲ್ಲಿ ರೂ. 41,000/- ಗಳನ್ನು ಹಾಕಿದ ನಂತರ ಆ ಹಣವನ್ನು 2ನೇ ಎದುರುದಾರರು ತೆಗೆದು ಹಣವನ್ನು ಏಣಿಸಿ ಮರಳಿ ಅದೇ ಬ್ಯಾಗದಲ್ಲಿಯೇ ಇಟ್ಟಿರುತ್ತಾರೆ. ಅಷ್ಟರಲ್ಲಿ ದೂರುದಾರರು ರೂಮ್ ಮುಂದಿನ ಪ್ಯಾಸೆಜ್‌ನಲ್ಲಿ ನಿಂತು ಕೆಳಗೆ ರಸ್ತೆಯ ಬದಿ ಅಲ್ಲಲ್ಲಿ ವಾಚ್ ಮಾಡುತ್ತಾ ನಿಂತಿದ್ದ ತನಿಖಾಧಿಕಾರಿ, ಪಂಚ-2 ಹಾಗೂ ಸಿಬ್ಬಂದಿಗೆ ತಮ್ಮ ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಲಂಚದ ಹಣ ಕೊಟ್ಟ ಬಗ್ಗೆ ಸಂಜ್ಞೆ ಮಾಡಿರುತ್ತಾರೆ. ತನಿಖಾಧಿಕಾರಿ ಹಾಗೂ ಸಿಬ್ಬಂದಿಯವರು ನಿಮ್ಮ ರೂಮಿಗೆ ಬಂದಾಗ ದೂರುದಾರರು ಅಲ್ಲಿಯೇ ಕುಳಿತಿದ್ದು, ಅವರು 2ನೇ ಎದುರುದಾರರನ್ನು ತೋರಿಸಿ ಇವರೇ ಮುರಡಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರಾಗಿರುತ್ತಾರೆಂದು ಹೇಳಿ ತಮ್ಮಿಂದ ಲಂಚದ ಹಣವನ್ನು ಪ್ಲಾಸ್ಟಿಕ್ ಬ್ಯಾಗನಲ್ಲಿ ಹಾಕಿಸಿಕೊಂಡು ನಂತರ ಏಣಿಸಿಕೊಂಡಿರುತ್ತಾರೆಂದು ಹೇಳಿದಾಗ ತನಿಖಾಧಿಕಾರಿಗಳು 2ನೇ ಎದುರುದಾರರಿಗೆ ತಮ್ಮ ಗುರುತಿನ ಚೀಟಿ ತೋರಿಸಿ ತಮ್ಮ, ಪಂಚರ ಹಾಗೂ ಸಿಬ್ಬಂದಿಯವರ ಪರಿಚಯ ಮಾಡಿಸಿ 2ನೇ ಎದುರುದಾರರ ಹಾಗೂ 1ನೇ ಎದುರುದಾರರ ವಿರುದ್ಧ ಲಂಚ ಪ್ರತಿಬಂಧಕ ಕಾಯ್ದೆ ಅಡಿಯಲ್ಲಿ ಎಸಿಬಿ ಗದಗದಲ್ಲಿ ಪ್ರಕರಣ ದಾಖಲಾಗಿರುತ್ತದೆಂದು ತಿಳಿಸಿ ಪ್ರಕರಣದ ತನಿಖೆಗೆ ಸಹಕರಿಸಲು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ನಿಮಗೆ ದೂರುದಾರರಿಂದ ಪಡೆದ ಲಂಚದ ಹಣ ಎಲ್ಲಿ ಇಟ್ಟುಕೊಂಡಿರುವೀರಿ ಎಂದು ಕೇಳಿದಾಗ 2ನೇ ಎದುರುದಾರರು ಕುಳಿತಿದ್ದ ಪಲಂಗದ ಮೇಲೆ ಪ್ಲಾಸ್ಟಿಕ ಬ್ಯಾಗನಲ್ಲಿ ಇಟ್ಟಿದ್ದ ಲಂಚದ ಹಣವನ್ನು ತೋರಿಸಿರುತ್ತಾರೆ. ತನಿಖಾಧಿಕಾರಿಯವರು 2ನೇ ಎದುರುದಾರರಿಗೆ 1ನೇ ಎದುರುದಾರರು ಎಲ್ಲಿ

ಸಿಗುತ್ತಾರೆಂದು ಕೇಳಿದಾಗ 2ನೇ ಎದುರುದಾರರು 1ನೇ ಎದುರುದಾರರ ಊರು ಜಂತ್ಲಿ-ಶಿರೂರು ಇರುತ್ತದೆ ಎಂದು ಹೇಳಿದಾಗ ತನಿಖಾಧಿಕಾರಿಯವರು ಫೋನ್ ಮಾಡಿ ಬರಲು ತಿಳಿಸುವಂತೆ ಹೇಳಿ ಪಿ.ಐ-2, ಶ್ರೀ ವಿಶ್ವನಾಥ. ಎಚ್ ಇವರಿಗೆ 1ನೇ ಎದುರುದಾರರನ್ನು ಕರೆದುಕೊಂಡು ಬರಲು ಕಳುಹಿಸಿರುತ್ತಾರೆ. ತನಿಖಾಧಿಕಾರಿಯವರು 2ನೇ ಎದುರುದಾರರು ಕುಳಿತಿದ್ದ ಫಲಂಗದ ಬದಿಯ ಇನ್ನೊಂದು ಪಲಂಗದ ಮೇಲೆ ತಮ್ಮ ಸಿಬ್ಬಂದಿಯವರ ಮುಖಾಂತರ ಎಳು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸೂಚಿಸಿದಂತೆ 2ನೇ ಎದುರುದಾರರು ತಮ್ಮ ಕೈಗಳನ್ನು ತಯಾರಿಸಿಟ್ಟಿದ್ದ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಪ್ರತ್ಯೇಕವಾಗಿ ಅದ್ದಿ ತೊಳೆದುಕೊಂಡಾಗ ಎರಡು ಕೈಗಳನ್ನು ತೊಳೆದ ದ್ರಾವಣದ ಬಣ್ಣವು ಅತೀ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರು ಸೂಚಿಸಿದಂತೆ ಪಂಚ-1 ರವರು 2ನೇ ಎದುರುದಾರರ ಪಕ್ಕದಲ್ಲಿದ್ದ ಪ್ಲಾಸ್ಟಿಕ್ ಬ್ಯಾಗನ್ನು ತೆಗೆದುಕೊಂಡ ಅದರಲ್ಲಿದ್ದ ಲಂಚದ ಹಣವನ್ನು ತೆಗೆದು ಹಾಜರಪಡಿಸಿ ಪರಿಶೀಲಿಸಿದಾಗ ಸದರಿ ನೋಟು ನಂಬರ್‌ಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡ ನಂಬರಗಳೊಂದಿಗೆ ತಾಳೆಯಾಗಿರುತ್ತದೆ. ತನಿಖಾಧಿಕಾರಿಗಳು ಸದರಿ ನೋಟುಗಳನ್ನು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚ-1 ರವರು ತಮ್ಮ ಎರಡು ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ದೂರುದಾರರ ಎರಡು ಕೈಗಳನ್ನು ತೊಳೆಯಲು ತಯಾರಿಸಿಟ್ಟ ಇನ್ನೂ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಅದ್ದಿ ತೊಳೆಸಿದಾಗ ದ್ರಾವಣದ ಬಣ್ಣ ಬದಲಾವಣೆಯಾಗಿರುವುದಿಲ್ಲ. ಅದೇ ದಿನ ಮುಂಜಾನೆ 10.00 ಗಂಟೆಗೆ ಪಿ.ಐ-2 ಶ್ರೀ.ವಿಶ್ವನಾಥ.ಎಚ್ ಇವರು ಸಿಬ್ಬಂದಿಯವರೊಂದಿಗೆ 1ನೇ ಎದುರುದಾರರನ್ನು ಕರೆದುಕೊಂಡು ಬಂದು ಹಾಜರಪಡಿಸಿರುತ್ತಾರೆ. ಆಗ ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಪರಿಚಯ ಮಾಡಿಕೊಂಡು ದೂರುದಾರರು 1 ಮತ್ತು 2ನೇ ಎದುರುದಾರರ ವಿರುದ್ಧ ನೀಡಿದ ದೂರಿನಂತೆ ಎಸಿಬಿ ಗದಗದಲ್ಲಿ ಪ್ರಕರಣ ದಾಖಲಾಗಿದ್ದ ಬಗ್ಗೆ ಮಾಹಿತಿ ಒದಗಿಸಿ ತನಿಖೆಗೆ ಸಹಕರಿಸಲು

ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರ ಬಳಿ ಇದ್ದ ವಾಯ್ಸ್ ರೆಕಾರ್ಡ್‌ನ್ನು ಹಾಜರಪಡಿಸಿಕೊಂಡು ಅದರಲ್ಲಿ ಲಂಚದ ಹಣ ಕೊಡುವ ಕಾಲಕ್ಕೆ ದಾಖಲಾಗಿರುವ ಸಂಭಾಷಣೆಯ ಭಾಗವನ್ನು ಸಿಬ್ಬಂದಿಯವರಿಂದ ಲ್ಯಾಪಟಾಪ್ ಮೂಲಕ ಕಾಫಿ ಮಾಡಿಸಿ ಸಿ.ಡಿ.ಗೆ ವರ್ಗಾಯಿಸಿಕೊಂಡು ಸಿ.ಡಿ.ಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು 1 ಮತ್ತು 2ನೇ ಎದುರುದಾರರಿಗೆ ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ವಿವರಣೆ ಬರೆದುಕೊಡಲು ತಿಳಿಸಿದ್ದು, ಆಗ 1ನೇ ಎದುರುದಾರರು ತಮ್ಮ ವಿವರಣೆಯಲ್ಲಿ "ನಾನು ಶ್ರೀ ಎಸ್. ಎಚ್ ಡಂಬಳ ಅಭಿವೃದಿ ಅಧಿಕಾರಿಗಳು ಗ್ರಾಮ ಪಂಚಾಯತ್ ಮುರಡಿ ವ ಮುರಡಿ ತಾಂಡ ದಿಂದ ಬರೆದುಕೊಡುವುದೇನೆಂದರೆ, ಶ್ರೀ ಬಾಲಪ್ಪ ಹೊಸಮನಿ ಇವರು ಮುರಡಿ ಗ್ರಾಮದಲ್ಲಿರುವ ರಿ.ಸನಂ. ಕ್ಷೇತ್ರ 2.10 ಗುಂಟೆಯಲ್ಲಿಯ ಎನ್‌ಎ ಮಾಡಿಸಿದ್ದು, ಅದನ್ನು ಎಂಟ್ರಿ ಅಂದರೆ 41 ಪ್ಲಾಟ್ ಎಂಟ್ರಿ ಮಾಡಲು ರೂ. 41,000/- ಎಂಟ್ರಿ ಮಾಡಿ ಕಂಪ್ಯೂಟರ್ ಉತಾರ ಕೊಡಬೇಕು ಅಂತ ಹೇಳಿದ್ದು, ಇರುತ್ತದೆ" ಅಂತ ಬರೆದುಕೊಟ್ಟಿದ್ದು, ನಂತರ 2ನೇ ಎದುರುದಾರರು ತಮ್ಮ ಲಿಖಿತ ವಿವರಣೆಯಲ್ಲಿ "ಪಿಡಿಓ ಡಂಬಳ ಸರ್ ಮುರಡಿ ಗ್ರಾಮದ ಎನ್.ಎ ಪ್ಲಾಟ್ ನೊಂದಣಿ ಸಲುವಾಗಿ ಶ್ರೀ ನಾಗರಾಜ್ ಇವರಿಗೆ ದುಡ್ಡು ಕೊಡಲು ಹೇಳಿದರಂತೆ ಆದ್ದರಿಂದ· ನಾಗರಾಜ್ ರವರು ನನಗೆ ದುಡ್ಡು ಕೊಟ್ಟರು ಅದರಂತೆ ರೂ. 41,000/- ಗಳಿದ್ದವು ಈ ವಿಷಯವನ್ನು ನನ್ನ ರೂಮನಲ್ಲಿ ಚರ್ಚೆ ಮಾಡಲಾಯಿತು ತದನಂತರ ಸರ್‌ಗೆ ಫೋನ್ ಮಾಡಿ ಹೇಳಿದ ನಂತರ ಬಂದು ಭೇಟಿಯಾಗುವುದಾಗಿ ಹೇಳಿದರು" ಅಂತ ಬರೆದು ಕೊಟ್ಟಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರು ದೂರುದಾರರಿಗೆ ಕೇಳಿದಾಗ ಅವರು ತಮ್ಮ 41 ಪ್ಲಾಟ್‌ಗಳ ಎಂಟ್ರಿ ಮಾಡಿ ಉತಾರ ಕೊಡುವಂತೆ ಹಲವಾರು ದಿನದಿಂದ ನಾನು ನಮ್ಮ ತಂದೆ ಅಲೆದಾಡಿದ್ದು, ಕೊನೆಗೆ 1 ಪ್ಲಾಟಿಗೆ ರೂ. 1,000/- ಲಂಚ ಕೊಡಲು ಕೇಳಿದ್ದು, 1 ಮತ್ತು 2ನೇ ಎದುರುದಾರರ ಮಾತುಗಳನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿದ್ದು, ಸರ್ಕಾರಿ ಪೀ ಪ್ರತ್ಯೇಕವಾಗಿ ತುಂಬುವುದು ಬಾಕಿ ಇರುತ್ತದೆ ಎಂದು ತಿಳಿಸಿ 41 ಪ್ಲಾಟ್ ಎಂಟ್ರಿ ಮಾಡಲು ಹಣಪಡೆದಿರುವುದಾಗಿ ತಿಳಿಸಿ 1ನೇ ಎದುರುದಾರರು ಹೇಳಿದ್ದು, ಸುಳ್ಳಾಗಿರುತ್ತದೆ ಎಂದು ಹೇಳಿ ತಮ್ಮ ಕೆಲಸ ಮಾಡಿಕೊಡಲು ಕೇಳಿದ ಲಂಚದ ಹಣವಾಗಿರುತ್ತದೆ. ಲಂಚದ ಹಣಕ್ಕಾಗಿ ಇಬ್ಬರು ಜನರು ಬೇಡಿಕೆಯಿಟ್ಟು, ಈ ದಿನ 2ನೇ ಎದುರುದಾರರಿಗೆ ಲಂಚದ ಹಣವನ್ನು ಕೊಡಲು ಹೋದಾಗ ಅವರು ಎಷ್ಟು ತಂದಿ

ಎಂದು ಹೇಳಿ ಹಣವನ್ನು ಪ್ಲಾಸ್ಟಿಕ್ ಬ್ಯಾಗನಲ್ಲಿ ಹಾಕಿಸಿಕೊಂಡು ಆ ಹಣವನ್ನು ಏಣಿಸಿ ಮರಳಿ ಪ್ಲಾಸ್ಟಿಕ್ ಬ್ಯಾಗನಲ್ಲಿ ಇಟ್ಟುಕೊಂಡಿರುತ್ತಾರೆ. ಆದರೆ 2ನೇ ಎದುರುದಾರರು 1ನೇ ಎದುರುದಾರರು ಹೇಳಿದಂತೆ ಹಣ ಪಡೆದುಕೊಂಡಿರುವುದು ಸುಳ್ಳಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಪಂಚ-1 ರವರಿಗೆ ಕೇಳಿದಾಗ ಅವರು 2ನೇ ಎದುರುದಾರರು ದೂರುದಾರರಿಂದ ಹಣವನ್ನು ಪ್ಲಾಸ್ಟಿಕ್ ಬ್ಯಾಗನಲ್ಲಿ ಹಾಕಿಸಿಕೊಂಡು ಏಣಿಸಿ ಕೊಂಡಿರುತ್ತಾರೆ. 1 ಮತ್ತು 2ನೇ ಎದುರುದಾರರ ಲಂಚದ ಬೇಡಿಕೆಯು ಸ್ಪಷ್ಟವಾಗಿದ್ದು, ಅವರು ಸುಳ್ಳು ವಿವರಣೆ ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

6 2ನೇ ಎದುರುದಾರರು ಪ್ಲಾಸ್ಟಿಕ್ ಬ್ಯಾಗನಲ್ಲಿದ್ದ ಲಂಚದ ಹಣವನ್ನು ತೆಗೆದುಕೊಂಡು ಏಣಿಸಿ ಮತ್ತೆ ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಹಾಕಿ ಇಟ್ಟಿರುತ್ತಾರೆ. ಹಣದ ಬಗ್ಗೆ ತನಿಖಾಧಿಕಾರಿಯು 1 ಮತ್ತು 2ನೇ ಎದುರುದಾರರನ್ನು ವಿಚಾರಿಸಿದಾಗ 1 ಮತ್ತು 2ನೇ ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7 ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, 1 ಮತ್ತು 2ನೇ ಎದುರುದಾರರುಗಳು ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

8 ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

9 ನಂತರ ಎದುರುದಾರರಿಗೆ ದಿನಾಂಕ 02/03/2022 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. 2ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 04/04/2022 ರಂದು ಸಲ್ಲಿಸಿರುತ್ತಾರೆ. 2ನೇ ಎದುರುದಾರರು ಸಲ್ಲಿಸಿದ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ, ದೂರುದಾರರು ತನ್ನ ಮತ್ತು 1ನೇ ಎದುರುದಾರರ ಮೇಲೆ ದುರುದ್ದೇಶದಿಂದ ಸುಳ್ಳು ದೂರನ್ನು ಸೃಷ್ಟಿ ಮಾಡಿ ತಮ್ಮ ವಿರುದ್ಧ ಈ ಮೊಕದ್ದಮೆಯನ್ನು ದಾಖಲಾಗುವಂತೆ ಮಾಡಿರುತ್ತಾರೆ. ದೂರುದಾರರು ಮತ್ಸರ ಮತ್ತು ದ್ವೇಷದಿಂದ ತನ್ನ ವಿರುದ್ಧ ಆರೋಪಗಳನ್ನು ಮಾಡಿ ಸುಳ್ಳು ಸಾಕ್ಷಿಗಳನ್ನು ಸೃಷ್ಟಿ ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ತನ್ನ ವಿರುದ್ಧ ಸಲ್ಲಿಸಲಾಗಿರುತ್ತದೆ. ಆದುದ್ದರಿಂದ ತನ್ನ ವಿವರಣೆಯನ್ನು

ಸಹಾನುಭೂತಿಯಿಂದ ಪರಿಗಣಿಸಿ ತನ್ನ ವಿರುದ್ಧ ಮಾಡಲಾದ ಆರೋಪಗಳಿಂದ ತನ್ನನ್ನು ಮುಕ್ತಗೊಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. 1ನೇ ಎದುರುದಾರರಿಗೆ ತನ್ನ ಸಮಜಾಯಿಷಿಯನ್ನು ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹಾ ಅವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 1ನೇ ಎದುರುದಾರರ ಸಮಜಾಯಿಷಿ ಇಲ್ಲವೆಂದು ತೀರ್ಮಾನಿಸಲಾಗಿರುತ್ತದೆ. ಹಾಗಾಗಿ, 2ನೇ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10 ದೂರುದಾರರ ಹೆಸರಿನಲ್ಲಿರುವ ಮುಂಡರಗಿ ತಾಲ್ಲೂಕು ಮುರಡಿ ಗ್ರಾಮದಲ್ಲಿರುವ 5 ಎಕರೆ 24 ಗುಂಟೆ ಜಮೀನಿನಲ್ಲಿ ಜಿಲ್ಲಾಧಿಕಾರಿಗಳು ಗದಗರವರು ಕೃಷಿಯೇತರ ಜಮೀನಾಗಿ ಪರಿವರ್ತನೆ ಮಾಡಿ ಆದೇಶ ಮಾಡಿದ್ದರಿಂದ ಕೃಷಿಯೇತರ ಜಮೀನಿನಲ್ಲಿ 43 ಪ್ಲಾಟ್‌ಗಳನ್ನು ಮಾಡಿದ್ದು, ಅದರಲ್ಲಿ 2 ಪ್ಲಾಟ್‌ಗಳನ್ನು ನಾಗರಿಕ ಸೌಲಭ್ಯಕ್ಕಾಗಿ ಕೊಟ್ಟು ಉಳಿದ 41 ಪ್ಲಾಟ್‌ಗಳನ್ನು ನೊಂದಣಿ ಮಾಡಿ ಉತಾರ ಕೊಡಲು ಪ್ರತಿ ಪ್ಲಾಟಿಗೆ ರೂ.1,000/- ರಂತೆ ಒಟ್ಟು ರೂ.41,000/- ಗಳನ್ನು ದಿ:14.08.2020 ರಂದು ಲಂಚದ ಹಣವನ್ನು ಪಡೆಯುವ ಮೂಲಕ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11 ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರುಗಳಾದ (1) ಶ್ರೀ ಸಿದ್ದಪ್ಪ ತಂದೆ ಹನಮಪ್ಪ ಡಂಬಳ,ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್ ಮುರುಡಿ, ತಾಲ್ಲೂಕು ಮುಂಡರಗಿ (ಸದ್ಯ ಗ್ರಾಮ ಪಂಚಾಯತ್ ಕದಾಂಪೂರ, ತಾಲ್ಲೂಕ: ಮುಂಡರಗಿ) (ನಿವೃತ್ತಿ ದಿ:30.04.2023) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ

214 (2)(ಬಿ) ರಡಿಯಲ್ಲಿ ಹಾಗೂ (2) ಶ್ರೀ ಪ್ರದೀಪ ಪರಶುರಾಮ ಕದಂ, ದ್ವಿತಿಯ ದರ್ಜೆ ಲೆಕ್ಕಸಹಾಯಕ, ಹಾರೋಗೇರಿ ಗ್ರಾಮ ಪಂಚಾಯತ್, ಹೆಚ್ಚುವರಿ ಪ್ರಭಾರ, ಮುರಡಿ ಗ್ರಾಮ ಪಂಚಾಯತ್, ತಾಲ್ಲೂಕಾ ಮುಂಡರಗಿ (ಸದ್ಯ ಗ್ರಾಮ ಪಂಚಾಯತ್ ಕೋಣ್ಣೂರ, ತಾಲ್ಲೂಕ: ನರಗುಂದ) (ನಿವೃತ್ತಿ ದಿ:30.06.2047) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸು ಮಾಡಲಾಗಿದೆ.

12 ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 10/7/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.